# 32 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

## ಸಿಸಿ ನಂಃ 31209/2022

**CW.**11 : **PW.**5

| | | |
|---|---|---|
| **ಸಾಕ್ಷಿದಾರರ ಹೆಸರು** | : | ಪಾರೀಶ್ |
| **ತಂದೆಯ ಹೆಸರು** | : | ಚಂದಪ್ಪ ಹೊನ್ನವಾಡ್ |
| **ವಯಸ್ಸು** | : | 38 ವರ್ಷ |
| **ಉದ್ಯೋಗ** | : | ಮುಖ್ಯ ಪೇದೆ |
| **ವಾಸಸ್ಥಳ** | : | ರಾಜಾಜಿನಗರ. |

**ಸಾಕ್ಷಿಯನ್ನು ದಿನಾಂಕ 04.01.2024 ರಂದು ಕರೆಸಿ ಪ್ರತಿಜ್ಞಾ ವಿಧಿ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು ದಿಃ 28.08.2021 ರಿಂದ ದಿಃ 15.12.2023 ವರೆಗೆ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 28.07.2022 ರಂದು ನಾನು ಠಾಣೆಯಲ್ಲಿದ್ದಾಗ ರಾತ್ರಿ 12-15 ಗಂಟೆಯ ಸಮಯಕ್ಕೆ ಈ ಪ್ರಕರಣದ ಪಿರ್ಯಾದಿ ಲಿಖಿತ ದೂರನ್ನು ನೀಡಿದ್ದು ಅದನ್ನು **ನಿಪಿ.7** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.7(ಎ)** ಎಂದು, ಪಿರ್ಯಾದಿಯ ಸಹಿಯನ್ನು **ನಿಪಿ.7(ಬಿ)** ಎಂದು ಗುರುತಿಸಲಾಯಿತು. ಸದರಿ ದೂರಿನ ಸಾರಾಂಶದ ಮೇರೆಗೆ ನಮ್ಮ ಠಾಣಾ ಮೊಕದ್ದಮೆ ಸಂಖ್ಯೆಃ111/2022 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದನ್ನು **ನಿಪಿ.8** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.8(ಎ)** ಎಂದು ಗುರುತಿಸಲಾಯಿತು.

3. ನಂತರ ಮುಂದಿನ ತನಿಖೆಗಾಗಿ ಸಂಪೂರ್ಣ ಕಡತವನ್ನು ಚಾಸಾ.12 ಅವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲಿಗಾಗಿಃ** ಆರೋಪಿ ಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆರೋಪಿ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸ ಇ**

**(ಲತಾ.ಜೆ),**

**32 ನೇ ಎ.ಸಿ.ಎಂ.ಎಂ. ಬೆಂಗಳೂರು.**